ಕೂಡ ಅವರ ಬಗ್ಗೆ ಹೇಳುತ್ತದೆ. ರೈತರ ಮೇಲೆ ಕೇಸ್ ಹಾಕಿದ್ದಾರೆ ಎನ್ನತಕ್ಕಂಥ ಮಾಹಿತಿ ಇಲ್ಲ. ಆದರೆ, ಇದು ಮಾಡಿರತಕ್ಕಂಥದ್ದು ತಪ್ಪು. ಆದ್ದರಿಂದ, ಆ ಅಧಿಕಾರಿ ಇರಬಾರದೆಂಬ ವಾದ ಪ್ರಾರಂಭವಾಗಿದೆ. ಆದ್ದರಿಂದ, ಇವರಿಗೆ ರಕ್ಷಣೆ ಕೊಡತಕ್ಕಂಥದ್ದು ಸರ್ಕಾರದ ಹೊಣೆಯಾಗಬೇಕು. ಹಾಗೆಯೇ, ಈ ಒಂದು ಕಾರಣಕ್ಕಾಗಿ ಅವರನ್ನು ವರ್ಗಾವಣೆ ಮಾಡತಕ್ಕಂಥದ್ದು, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಆಗಬಾರದೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೆ ನಮ್ಮ ಮಲೆನಾಡು ಪ್ರದೇಶದಲ್ಲಿ ಎಲ್ಲಾ ಕಡೆ ಗಂಧ ಕಡೆದಿರತಕ್ಕಂಥ . .

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಜೀವರಾಜ್‌ರವರೆ, ಒಂದು ನಿಮಿಷ ಈಲ್ಡ್ ಆಗಿ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ಹರಿಯಾಣದಲ್ಲಿ ಕಾರ್ಮಿಕರ ಮೇಲೆ ನಡೆದ ಅಮಾನುಷವಾದಂತಹ ಧಾಳಿ ಬಗ್ಗೆ ಖಂಡನೆ ಕುರಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ): ಮಾನ್ಯ ಛೇರ್ಮನ್‌ರವರೆ, ಮಾನ್ಯ ಮುಖ್ಯಮಂತ್ರಿಯವರು ಇಲ್ಲಿರುವುದರಿಂದ ಒಂದು ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಬೆಂಗಳೂರಿನಲ್ಲಿ ಕಾರ್ಮಿಕರೆಲ್ಲರೂ ಧರಣಿ ಕುಳಿತುಕೊಂಡಿದ್ದಾರೆ. ಏಕೆಂದರೆ, ಇಡೀ ದೇಶ ನಾಚುವಂಥ ರೀತಿಯಲ್ಲಿ ಹರಿಯಾಣದಲ್ಲಿ ಕಾರ್ಮಿಕರ ಮೇಲೆ ನಡೆದಂಥ ಪೊಲೀಸರ ಪೈಶಾಚಿಕ ಅಮಾನುಷವಾದಂಥ ಧಾಳಿ ಬಗ್ಗೆ ಖಂಡನೆ ಮಾಡುವುದಕ್ಕೋಸ್ಕರ ಕಾರ್ಮಿಕರು ಟೌನ್‌ಹಾಲ್ ಮುಂದೆ ಇವತ್ತಿನದಿವಸ ಧರಣಿ ಕುಳಿತುಕೊಂಡಿದ್ದಾರೆ. ಮತ್ತೆ ನೆನ್ನೆದಿವಸ ಟಯೋಟಾ ಫ್ಯಾಕ್ಟರಿಯಲ್ಲಿಯೂ ಕೂಡ ಅದೇ ಪರಿಸ್ಥಿತಿ ನಿರ್ಮಾಣವಾಗಿದೆ. ನನಗೆ ಐದು ಗಂಟೆಗೆ ಅಲ್ಲಿಂದ ಫೋನ್ ಮಾಡಿ ಹೇಳಿದರು. ಏನೆಂದರೆ ಇಡೀ ಟಯೋಟಾ ಫ್ಯಾಕ್ಟರಿಯನ್ನು ಪೊಲೀಸ್‌ನವರು ಸುತ್ತುವರಿದಿದ್ದು, ಅಲ್ಲಿಗೆ ಒಬ್ಬ ಸರ್ಕಲ್ ಇನ್ಸ್‌ಪೆಕ್ಟರವರು ಹೋಗಿ ಏನು ಹೇಳಿದ್ದಾನೆಂದರೆ, ಹರಿಯಾಣದಲ್ಲಿ ಕಾರ್ಮಿಕರಿಗೆ ಹೊಡೆದ ಹಾಗೆ ನಿಮ್ಮನ್ನು ಕೂಡ ಬಡಿದು ಹಾಕುತ್ತೇವೆ, ನೀವೇನಾದರೂ ಹೊರಗಡೆ ಗಲಾಟೆ ಮಾಡಿದರೆ ಆ ರೀತಿ ಇಲ್ಲಿಯೂ ಕೂಡ ಮಾಡುತ್ತೇವೆಂದು ಆತ ಬೆದರಿಸಿದ್ದಾನೆ. ಹರಿಯಾಣದಲ್ಲಿ ಕಾರ್ಮಿಕರ ಮೇಲೆ ನಡೆದಿರತಕ್ಕಂಥ ಘಟನೆಯನ್ನು ಸುಮಾರು ಜನ ಟಿ.ವಿ.ಯಲ್ಲಿ ನೋಡಿದ್ದಾರೆ ಕಾರ್ಮಿಕರ ಮೇಲೆ ಈ ರೀತಿಯಾದ ಒಂದು ಅಮಾನುಷವಾದಂಥ ಕೆಲಸ ಬ್ರಿಟೀಷರ ಕಾಲದಲ್ಲಿಯೂ ಕೂಡ ನಡೆದಿರಲಿಲ್ಲ. ಆ ರೀತಿಯಾದ ಒಂದು ಧಾಳಿ ಅಲ್ಲಿ ನಡೆದಿದೆ. ಒಬ್ಬ ಹುಡುಗನನ್ನು ಪೊಲೀಸ್‌ನವರು ಹಿಡಿದುಕೊಂಡು ಹೊಡೆಯುತ್ತಿರುವ ಒಂದು ಫೋಟೋವನ್ನು ಹಿಂದೂ ಪತ್ರಿಕೆಯಲ್ಲಿ ಹಾಕಿದ್ದಾರೆ. ಇದನ್ನು ನೋಡಿಬಿಟ್ಟರೆ ನಿಜವಾಗಿಯೂ ಕೂಡ ಹ್ಯೂಮನ್ ರೈಟ್ ಕಮೀಷನ್‌ರವರು ಅಲ್ಲಿರತಕ್ಕಂಥ ಸರ್ಕಾರವನ್ನೇ ಡಿಸ್‌ಮಿಸ್ ಮಾಡಬೇಕು. ಆ ರೀತಿಯಾದ ಒಂದು ಘಟನೆ ಅಲ್ಲಿ ನಡೆದಿದೆ. ಆ ಘಟನೆ ಬಗ್ಗೆ ಇಡೀ ಸದನ ಖಂಡನೆ ಮಾಡಬೇಕು. ಹಾಗೆಯೇ, ಕಾರ್ಮಿಕರ ಹೋರಾಟದಲ್ಲಿ ಪೊಲೀಸ್‌ನವರು ಮಧ್ಯಪ್ರದೇಶ ಮಾಡತಕ್ಕಂಥದ್ದನ್ನು ತಡೆಗಟ್ಟಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ): ಮಾನ್ಯ ಛೇರ್ಮನ್‌ರವರೆ, ಹೊಂಡಾ ಮೋಟಾರ್ಸ್‌ನವರು ಗುರಗಾಂವ್‌ನಲ್ಲಿ ಏನು ಮಾಡಿದ್ದಾರೆ ಅದನ್ನು ಅಂದರೆ, ನಾವು ಬೇರೆ ರಾಜ್ಯದ ಘಟನೆಯನ್ನು ಇಲ್ಲಿ ಚರ್ಚೆ ಮಾಡುವುದು ಸೂಕ್ತವಲ್ಲ. ಆದರೂ ಕೂಡ ಒಂದು ಸಂಘಟನೆಯ ಮೇಲೆ ಮತ್ತು ನ್ಯಾಯಕ್ಕೋಸ್ಕರ ಹೋರಾಟ ಮಾಡತಕ್ಕಂಥವರ ಮೇಲೆ ಅದರಲ್ಲಿಯೂ ಮುಖ್ಯವಾಗಿ ಮಹಿಳೆಯರ ಮೇಲೆ ಮಾಡಿರತಕ್ಕಂಥ ದೌರ್ಜನ್ಯವನ್ನು ನೋಡಿಬಿಟ್ಟರೆ, ಮನುಷ್ಯತ್ವ ಇರತಕ್ಕಂಥವರ್ಯಾರು

ನಾಗರೀಕ ಸಮಾಜದಲ್ಲಿ ತಲೆ ಎತ್ತಿಕೊಂಡು ಬಾಳುವಸ್ಥಿತಿಯಲ್ಲಿ ಇವತ್ತಿನದಿವಸ ನಾವು ಯಾರೂ ಇಲ್ಲ. ಈ ವಿಷಯವನ್ನು ಇವತ್ತು ಬೆಳಿಗ್ಗೆಯೇ ಇಲ್ಲಿ ಪ್ರಸ್ತಾಪ ಮಾಡಬೇಕೆಂದು ಇದ್ದೆವು. ಅಕಸ್ಮಾತ್ ಬೆಳಿಗ್ಗೆ ಬೇಡಿಕೆಗಳ ಮೇಲೆ ಚರ್ಚೆ ಪ್ರಾರಂಭವಾಗುವುದರೊಂದಿಗೆ ಸಭೆ ಶುರುವಾಗಿದ್ದರಿಂದ ಮತ್ತು ಮಾನ್ಯ ಮುಖ್ಯಮಂತ್ರಿಯವರು ಈಗ ಬಂದಿದ್ದರಿಂದ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಇವತ್ತಿನದಿವಸ ಆ ಕಾರ್ಮಿಕರ ಸಂಸಾರದ ಯಾತನೆ, ನೋವು ಆಗುವುದಲ್ಲದೆ ಫ್ಯಾಕ್ಟರಿಗೆ ಹೋಗಿರತಕ್ಕಂಥವರು ಯಾವಾಗ ಮನೆಗೆ ಬರುತ್ತಾರೆಂದು ಮನೆಯವರು ಕಾಯುತ್ತಾ, ಅವರು ಮತ್ತೆ ವಾಪಸು ಬರಬಹುದೇ ಅಥವಾ ಅಲ್ಲಿ, ಇಲ್ಲಿ ಹೋಗಿರಬಹುದಾ ಎಂದು ಕಾಯುತ್ತಾ ಕುಳಿತುಕೊಂಡಿರುತ್ತಾರೆ. ಇವತ್ತಿನದಿವಸ ಕನಿಷ್ಠ ಅವರ ಐಡೆಂಟಿಟಿಯನ್ನು ಡಿಸ್‌ಕ್ಲೋಸ್ ಮಾಡಿಲ್ಲ. ಅಂದರೆ, ಇಂಥ ಕಡೆ ಇದ್ದಾರೆ, ಇಂಥಿಂಥವರು ಇದ್ದಾರೆ ಮತ್ತೆ ಇಂಥಿಂಥವರು ಕಸ್ಟಡಿಯಲ್ಲಿದ್ದಾರೆ ಮತ್ತು ಇಂಥಿಂಥವರನ್ನು ಇಂಥ ಕಡೆ ಇಟ್ಟಿದ್ದೇವೆ ಎಂದು ಹೇಳುವಷ್ಟು ಸೌಜನ್ಯವನ್ನು ತೋರಿಸಿಲ್ಲ. ಹ್ಯೂಮನ್ ರೈಟ್ ಕಮೀಷನ್ ಹಾಕಿರತಕ್ಕಂಥ ಮೊದಲನೇ ಕಂಡೀಷನ್ ಏನೆಂದರೆ, ಯಾರನ್ನಾದರೂ ನಾವು ಅರೆಸ್ಟ್ ಮಾಡಿದರೆ ಅವರ ಮನೆಗೆ ಮೊದಲೆ ಐಡೆಂಟಿಟಿ ಕೊಡಬೇಕು ಮತ್ತು ಅರೆಸ್ಟ್ ಮೆಮೊವನ್ನು ಅವರಿಗೆ ಸರ್ವ್ ಮಾಡಬೇಕೆಂದು ಇದೆ. ಆದರೆ, ಈ ಒಂದು ಸೌಜನ್ಯ ಕೂಡ ಈ ದೇಶದಲ್ಲಿ ನಡೆದಿಲ್ಲ. ನಾಗರೀಕರೆಂದರೆ ಇವತ್ತಿನದಿವಸ ಎಲ್ಲರೂ ಕೂಡ ಒಂದೆ. ಅಂದರೆ ಹರಿಯಾಣದವರು ಮತ್ತು ಕರ್ನಾಟಕದವರೆಲ್ಲರೂ ಒಂದೇ, ಇಂಥ ಘಟನೆ ಇವತ್ತು ಏನು ನಡೆದಿದೆ ಇದರ ಬಗ್ಗೆ ಅಂದರೆ ಅವರಿಗೆ ಏನಾದರೂ ಅನುಕಂಪ ಸೂಚಿಸುವಂಥ ಒಂದು ಮಾತನ್ನು ಆಡಬೇಕು ಮತ್ತೆ ಸನ್ಮಾನ್ಯ ಸಭಾನಾಯಕರೂ ಕೂಡ ಅದರ ಜೊತೆ ಸೇರಿಕೊಳ್ಳಬೇಕೆಂದು ನಾವು ಕೇಳಿಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಛೇರ್ಮನ್‌ರವರೆ, ಅಲ್ಲಿ ಬಹಳ ದೊಡ್ಡ ದುರಂತವೇ ನಡೆದು ಹೋಗಿದೆ. ಆದ್ದರಿಂದ, ಇದರ ಬಗ್ಗೆ ಸಮಗ್ರವಾದ ತನಿಖೆ ಆಗಬೇಕಾಗಿದೆ. ದೂರದರ್ಶನದಲ್ಲಿ ಈ ಒಂದು ಘಟನೆಯನ್ನು ನೋಡಿದರೆ ಪೊಲೀಸ್‌ನವರು ಅಲ್ಲಿ ನಡೆದುಕೊಂಡಿರತಕ್ಕಂಥ ಅಮಾನವೀಯ ಕೃತ್ಯ ಇಡೀ ದೇಶದಲ್ಲಿ ಎಲ್ಲಿಯೂ ಕೂಡ ನಡೆದಿರಲಿಲ್ಲ. ಆದ್ದರಿಂದ, ಇಡೀ ದೇಶದ ಎಲ್ಲಾ ಶಾಸನಸಭೆಗಳಲ್ಲಿಯೂ ಕೂಡ ಇದನ್ನು ನಾವು ಖಂಡನೆ ಮಾಡಬೇಕಾಗುತ್ತದೆ.

ಶ್ರೀ ಶಿವರಾಜ್ ಸಜ್ಜನರ್: ಮಾನ್ಯ ಛೇರ್ಮನ್‌ರವರೆ, ಹರಿಯಾಣದಲ್ಲಿ ನಡೆದಂಥ ಘಟನೆಯಲ್ಲಿ 35 ಜನ ಕರ್ನಾಟಕದವರು ಇದ್ದಾರೆ ಎನ್ನತಕ್ಕಂಥದ್ದನ್ನು ದಯವಿಟ್ಟು ಗಮನಿಸಬೇಕು. 35 ಜನ ಕನ್ನಡಿಗರಿಗೂ ಅಲ್ಲಿ ಹೊಡೆತ ಬಿದ್ದಿದೆ.

ಶ್ರೀ ಗೋವಿಂದ ಎಂ. ಕಾರಜೋಳ: ಸನ್ಮಾನ್ಯ ಛೇರ್ಮನ್‌ರವರೆ, ಮೊನ್ನೆದಿವಸ ಹರಿಯಾಣದಲ್ಲಿರತಕ್ಕಂಥ ಹೊಂಡಾ ಕಂಪನಿಯ ಕಾರ್ಮಿಕರ ಮೇಲೆ ಏನು ದೌರ್ಜನ್ಯ ನಡೆದಿದೆ ಅದು ಜಲಿಯನ್ ವಾಲಾಬಾಗ್‌ನಲ್ಲಿ ನಡೆದಿರತಕ್ಕಂಥ ಘಟನೆಗಿಂಥ ಹೀನಾಯವಾದ ಘಟನೆಯಾಗಿದೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಹೇಳಿದಂತೆ ಈ ಸಂದರ್ಭದಲ್ಲಿ ಇಡೀ ಸದನವೇ ಇದನ್ನು ಖಂಡಿಸಬೇಕಾಗುತ್ತದೆ. ಇಂಥ ಒಂದು ನಿರ್ಣಯವನ್ನು ಈ ಸದನದ ಮೂಲಕ ಪಾಸ್ ಮಾಡಿ ಕಳುಹಿಸುವುದರಿಂದ ತಪ್ಪೇನು ಆಗುವುದಿಲ್ಲ. ಆದ್ದರಿಂದ ನಾನೂ ಕೂಡ ಅದಕ್ಕೆ ಸಹಮತವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಛೇರ್ಮನ್‌ರವರೆ, ಹರಿಯಾಣದಲ್ಲಿನ ಹೊಂಡಾ ಕಂಪನಿಯಲ್ಲಿ ಆಗಿರತಕ್ಕಂಥ ಘಟನೆಯ ಬಗ್ಗೆ ನಾವು ಅನುಕಂಪವನ್ನು ಖಂಡಿತ ವ್ಯಕ್ತಪಡಿಸಬೇಕು. ಹಾಗೆಯೇ ಇದರ ಜೊತೆಗೆ ನಮ್ಮ ಬೈಕಂಪಾಡಿಯಲ್ಲಿರುವ ಎಂಸಿಎಫ್ ಫ್ಯಾಕ್ಟರಿಗೆ ಸಂಬಂಧಪಟ್ಟಂತೆ ಈಗಾಗಲೇ ಪ್ರಸ್ತಾಪ ಮಾಡಿದ್ದಾರೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿರುವುದರಿಂದ ಈ ವಿಷಯವನ್ನು ಮತ್ತೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವೇ ಇದರ ಬಗ್ಗೆ ಹ್ಯಾಂಡಲ್ ಮಾಡಿದರೂ ಕೂಡ ಇದು ಇತ್ಯರ್ಥಕ್ಕೆ ಬಾರದೆ ಇರುವುದರಿಂದ ಅಲ್ಲಿ ಈಗಾಗಲೇ ಮೂರು ಜನ ಸತ್ತು ಹೋಗಿದ್ದಾರೆ. ಆದ್ದರಿಂದ, ಅದಕ್ಕೆ ಏನಾದರೊಂದು ಪರಿಹಾರ ಸೂಚಿಸಬೇಕೆಂದು ಈ ಸಂದರ್ಭದಲ್ಲಿ ನಾನು ವಿನಯಪೂರ್ವಕವಾಗಿ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಛೇರ್ಮನ್‌ರವರೆ, ದಕ್ಷ ಅಧಿಕಾರಿಗಳಿಗೆ ರಕ್ಷಣೆ ಕೊಡತಕ್ಕಂಥದ್ದು ಸರ್ಕಾರದ ಹೊಣೆಗಾರಿಕೆ ಆಗಬೇಕೆಂದು ನಾನು ಈಗಾಗಲೇ ಹೇಳುತ್ತಿದ್ದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಜೀವರಾಜ್‌ರವರೆ, ಒಂದು ನಿಮಿಷ. ನಾವು ಈಗಾಗಲೇ ಪ್ರಸ್ತಾಪ ಮಾಡಿರತಕ್ಕಂಥ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರು ಈಗ ಉತ್ತರ ಕೊಡುತ್ತಾರೆ.

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು): ಮಾನ್ಯ ಛೇರ್ಮನ್‌ರವರೆ, ಮಾನ್ಯ ಜೀವರಾಜ್‌ರವರೂ ಕೂಡ ಈ ವಿಷಯದ ಬಗ್ಗೆ ಮಾತನಾಡುತ್ತಾರೆಂದು ನಾನು ತಿಳಿದು ಕೊಂಡಿದ್ದೆ.

ಛೇರ್ಮನ್: ಅವರು ಬೇಡಿಕೆ ಮೇಲೆ ಮಾತನಾಡುತ್ತಿದ್ದರು. ಮಧ್ಯದಲ್ಲಿ ಈ ವಿಷಯ ಪ್ರಸ್ತಾಪ ಮಾಡಲಾಗಿದೆ.

ಶ್ರೀ ಧರ್ಮಸಿಂಗ್(ಮುಖ್ಯಮಂತ್ರಿಗಳು): ಮಾನ್ಯ ಛೇರ್ಮನ್‌ರವರೆ, ಮೊನ್ನೆದಿವಸ ಹರಿಯಾಣದ ಗುರಗಾಂವ್ ಹತ್ತಿರ ಮತ್ತು ದೆಹಲಿ ಹತ್ತಿರ ನಡೆದಂಥ ಘಟನೆ ಇಡೀ ದೇಶದಲ್ಲಿಯೇ ಒಂದು ಪ್ರಮುಖವಾದ ಪ್ರಶ್ನೆಯಾಗಿದೆ. ಮತ್ತೆ ಬಿಡದಿ ಹತ್ತಿರ ಇರತಕ್ಕಂಥ ಟಯೋಟಾ ಫ್ಯಾಕ್ಟರಿಯಲ್ಲಿ ಕೂಡ ಈ ರೀತಿ ಆಗುತ್ತದೆ ಎಂದು ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ವಾಟಾಳ್‌ನಾಗರಾಜ್ ಮತ್ತು ಮಾನ್ಯ ಮಾಧುಸ್ವಾಮಿಯವರು ಹಾಗೂ ವಿರೋಧ ಪಕ್ಷದ ಉಪ ನಾಯಕರು ಆಗಿರತಕ್ಕಂಥ ಮಾನ್ಯ ಕಾರಜೋಳರವರು ಹಾಗೂ ಮಂಗಳೂರಿನ ಘಟನೆ ಬಗ್ಗೆ ಮಾನ್ಯ ಯೋಗೀಶ್‌ಭಟ್‌ರವರೂ ಕೂಡ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಮಂಗಳೂರಿನಲ್ಲಿ ನಡೆಯುತ್ತಿರುವ ಘಟನೆ ಬಹಳ ದಿವಸಗಳಿಂದ ನಡೆಯುತ್ತಿದೆ ಮತ್ತೆ ಇದರ ಬಗ್ಗೆ ನಿಮ್ಮ ಸಮ್ಮುಖದಲ್ಲಿ ಸಾಕಷ್ಟು ಸಲ ಚರ್ಚೆ ಮಾಡಿದ್ದೇನೆ. ಮತ್ತೆ ಇದರ ಬಗ್ಗೆ ಮಾನ್ಯ ವಿಜಯಮಲ್ಯರವರ ಜೊತೆ ಕೂಡ ಸಂಪರ್ಕ ಮಾಡಿ ಮಾತನಾಡಿದ್ದೇನೆ. ಆದರೂ ಕೂಡ ಅಲ್ಲಿ ಇನ್ನು ಇತ್ಯರ್ಥ ಆಗುತ್ತಿಲ್ಲ. ಅದರ ಬಗ್ಗೆ ನೋಡುತ್ತೇನೆ. ಇವತ್ತಿನದಿವಸ ರಾಜ್ಯ ನಡೆಸುವವರಿಗೆ, ಕಾರ್ಮಿಕರ ಮೇಲೆ ಕಳಕಳಿ ಇರಬೇಕು. ಮತ್ತೆ ಅವರ ಪ್ರವೃತ್ತಿಯಲ್ಲಿಯೂ ಕೂಡ ಬದಲಾವಣೆ ಆಗಬೇಕು. ಮತ್ತೆ ಎಲ್ಲಿ ಸ್ಟ್ರೈಕ್ ಆಗುತ್ತದೆ ಅಲ್ಲಿಗೆ ಪೊಲೀಸ್‌ನವರು ಹೋದಾಗ ಅವರು ಅಲ್ಲಿರತಕ್ಕಂಥವರ ಮೇಲೆ ಅಮಾನುಷವಾಗಿ ಶುಮ್ಮನೆ ಹೊಡೆಯತಕ್ಕಂಥದ್ದು ಸರಿಯಲ್ಲ. ನಾನೂ ಕೂಡ ಅದನ್ನು ಟಿ.ವಿ.ಯಲ್ಲಿ ನೋಡಿದ್ದು ಅದರ ಬಗ್ಗೆ ನನಗೂ ಕೂಡ ಬಹಳ ಅಸಮಾಧಾನವಾಗಿದೆ. ಮೊನ್ನೆದಿವಸ ಇದರ ಬಗ್ಗೆ ಮಾನ್ಯ ಶಿವರಾಜ್‌ಪಾಟೀಲ್‌ರವರೂ ಕೂಡ ಹೇಳಿಕೆಯನ್ನು ಕೊಟ್ಟಿದ್ದಾರೆ. ಮತ್ತೆ ಲೋಕಸಭೆಯಲ್ಲಿ ಇವತ್ತು

ಏನು 60 ಕ್ಕಿಂತ ಹೆಚ್ಚು ಜನ ಎಡರಂಗಕ್ಕೆ ಸಂಬಂಧಪಟ್ಟವರು ಇದ್ದಾರೆ ಮತ್ತು ಇತರರೂ ಕೂಡ ಅಂದರೆ ವಿರೋಧಪಕ್ಷದಲ್ಲಿರತಕ್ಕಂಥ ಬಿ.ಜೆ.ಪಿ. ನಾಯಕರೂ ಕೂಡ ಈ ಘಟನೆ ಬಗ್ಗೆ ಖಂಡಿಸಿ ಈ ರೀತಿಯಾದ ಘಟನೆ ಆಗಬಾರದಾಗಿತ್ತೆಂದು ಹೇಳಿದ್ದಾರೆ. ಹಾಗೆಯೇ ಯುಪಿಎ ಅಧ್ಯಕ್ಷರಾಗಿರತಕ್ಕಂಥ ಶ್ರೀಮತಿ ಸೋನಿಯಾಗಾಂಧಿಯವರು ಕೂಡ ಈ ರೀತಿಯಾದ ಘಟನೆಗಳು ಆಗಬಾರದೆಂದು ಇದರ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ. ಮತ್ತೆ ಮಾನ್ಯ ಪ್ರಧಾನಮಂತ್ರಿಗಳೂ ಕೂಡ ಮಾನ್ಯ ಹರಿಶ್ಚಂದ್ರ ಹೂಡಾರವರನ್ನು ಕರೆಸಿ ಅವರಿಗೆ ಸ್ವಲ್ಪ ತಾಕೀತು ಕೂಡ ಮಾಡಿದ್ದಾರೆ. ಅಲ್ಲಿ ಸ್ವಲ್ಪ ಎಕ್ಸಸ್ ಆಗಿದೆ. ಇವತ್ತು ಕರ್ನಾಟಕ ರಾಜ್ಯದಲ್ಲಿ ಆ ರೀತಿಯಾದ ಒಂದೆರಡು ಘಟನೆಗಳು ನಡೆಯಬಹುದು. ಆದರೆ ಆ ರೀತಿಯಾದ ಘಟನೆ ಈಗ ನಮ್ಮ ರಾಜ್ಯದಲ್ಲಿ ನಡೆದಿಲ್ಲ. ನಮ್ಮ ರಾಜ್ಯದಲ್ಲಿ ಕೆಲವು ಕಡೆ ಅದೇ ರೀತಿಯಾದ ಘಟನೆಗಳು ನಡೆಯಬಹುದು, ಆದ್ದರಿಂದ ಅದು ಆಗಬಾರದೆಂದು ಮಾನ್ಯ ಶ್ರೀರಾಮರೆಡ್ಡಿಯವರು ಈಗಾಗಲೇ ಹೇಳಿದ್ದಾರೆ. ನಾನು ಅದರ ಬಗ್ಗೆ ನಿಗಾವಹಿಸುತ್ತೇನೆ. ಮತ್ತೆ ಇದರ ಬಗ್ಗೆ ನಮ್ಮ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಆದೇಶ ಕೂಡ ಕೊಡುತ್ತೇನೆ. ಆದರೆ, ಹೊಂಡಾ ಕಂಪನಿಯಲ್ಲಿ ಈ ರೀತಿಯಾದ ಒಂದು ಘಟನೆ ನಡೆದಿದ್ದು, ಅಲ್ಲಿನ ಕಾರ್ಮಿಕ ಸಂಘಟನೆ ಮೇಲೆ ಒಂದು ರೀತಿಯ ಧಕ್ಕೆಬರುತ್ತದೆ. ಕಾರ್ಮಿಕ ಸಂಘಟಿಕರಾಗಿದ್ದ ಶ್ರೀ ಶ್ರೀಪಾದ್ ಅಮೃತ್ ಡಾಂಗೆಯವರು, the first leader of the opposition in the Parliament, ಒಂದು ಸಲ ಕೋರ್ಟ್‌ನಲ್ಲಿ ಅವರು 17 ಗಂಟೆಗಳ ಕಾಲ ಲೇಬರ್ ಲಾ ಮೇಲೆ ಮಾತನಾಡಿದ್ದಾರೆ. ಇವತ್ತಿನದಿವಸ ಲೇಬರ್‌ಗಳ ಶ್ರಮ ಏನಿದೆ ಎಂಬುದನ್ನು ಸರಿಯಾದ ರೀತಿಯಲ್ಲಿ ಮನಃಪೂರ್ವಕವಾಗಿ ತಿಳಿದು ಕೊಳ್ಳತಕ್ಕಂಥದ್ದು ಅವಶ್ಯಕತೆ ಇದೆ. ಆದ್ದರಿಂದ, ಈ ರೀತಿಯಾದ ಒಂದು ಪ್ರವೃತ್ತಿಯನ್ನು ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲಿಯೂ ಕೂಡ ಈ ರೀತಿಯಾಗಿ ಆಗುವುದಿಲ್ಲವೆಂದು ನಾನು ಹೇಳುವುದಿಲ್ಲ. ಒಂದೆರಡು ಕಡೆ ಆಗುತ್ತದೆ. ಪೊಲೀಸ್‌ನವರು ಹೋಗಿ ಅಲ್ಲಿ ದೌರ್ಜನ್ಯ ಮಾಡುತ್ತಾರೆ. ಬಿಚ್ಚು ಮನಸ್ಸಿನಿಂದ ಹೇಳಬೇಕಾದರೆ, ಮಾಲೀಕರು ಪ್ರಭಾವಿಯಾಗಿದ್ದರೆ ಅವರ ಕಡೆ ಇವರು ಕೆಲಸ ಮಾಡುತ್ತಾರೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಆದರೆ, ಅಲ್ಲಿರತಕ್ಕಂಥ ಪೊಲೀಸ್ ಅಧಿಕಾರಿಗಳು ಇದನ್ನು ಮಾಡಬೇಕಾಗಿತ್ತು. ಮತ್ತೆ ಅಲ್ಲಿ ನಡೆದಿರತಕ್ಕಂಥ ಘಟನೆ ಸರಿಯಾದುದಲ್ಲ. ಯಾರೂ ಕೂಡ ಇದರ ಬಗ್ಗೆ ಸರಿಯಾಗಿದೆ ಎನ್ನುವ ಮಾತು ಎಲ್ಲೂ ಹೇಳಿಲ್ಲ, ಅದಕ್ಕೆ ನಾವೂ ಕೂಡ ವಿಷಾದ ವ್ಯಕ್ತಪಡಿಸುತ್ತಾ, ಇಲ್ಲಿ ಕೂಡ ಅಂಥ ಘಟನೆಗಳು ಮರುಕಳಿಸದ ರೀತಿಯಲ್ಲಿ ನೋಡಿಕೊಳ್ಳುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ: ಮಂಗಳೂರಿನಲ್ಲಿ ಮೂರು ಜನ ಸತ್ತರು ಆ ಮಾಲೀಕರಿಗೆ ಮನ ಕರಗದಿದ್ದರೆ ಅವರು ಎಂಥ ಕಠಿಣ ಮನಸ್ಸಿನವರು ಇರಬೇಕು? ಮಾನ್ಯ ಸಿಂಧ್ಯಾರವರೂ ಕೂಡ ಅವರನ್ನು ಕರೆಸುತ್ತೇವೆಂದು ಹೇಳಿದ್ದರು, ಪುನಃ ಅವರನ್ನು ಕರೆಸಿ ಸಭೆ ಮಾಡುತ್ತೇವೆಂದು ಹೇಳಿದ್ದರು, ಅತಿ ಶೀಘ್ರವಾಗಿ ಈ ಕೆಲಸ ಮಾಡಬೇಕು, ಏಕೆಂದರೆ, ಬೇರೆಯವರು ಸಾಯುವ ಮುಂಚೆ, ಬೇರೆಯವರಿಗೆ ಸಾಯುವುದಕ್ಕೆ ಅವಕಾಶ ಸಿಗುವುದಕ್ಕಿಂತ ಮುಂಚೆ ತಾವು ಮಾಡಬೇಕು. ಈಗ ಹರಿಯಾಣದಲ್ಲಿ ಒಂದು ರೀತಿಯಾದರೆ ಮಂಗಳೂರಿನಲ್ಲಿ ಮತ್ತೊಂದು ರೀತಿ ಪರಿಸ್ಥಿತಿ. ದಯವಿಟ್ಟು ಅದನ್ನು ಶೀಘ್ರದಲ್ಲಿ ಪರಿಹಾರ ಮಾಡಬೇಕೆಂದು ತಮ್ಮ ಮುಖೇನ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಎನ್. ಯೋಗೀಶ್ ಭಟ್: ಮಾನವೀಯತೆಯ ಹಿನ್ನೆಲೆಯಲ್ಲಿ ಅವರನ್ನು ತಕ್ಷಣ ಕರೆಯುವಂಥ ಕೆಲಸ ಮಾಡಬೇಕು. ಉಳಿದವರಿಗೆ ತಕ್ಷಣ ನ್ಯಾಯ ಕೊಡಿಸುವಂಥ ಕೆಲಸ ಆಗಬೇಕು. ದಯವಿಟ್ಟು ಆದೇಶವಾದರೂ ಕೊಡಿ ಸಾರ್. .

ಶ್ರೀ ಬಿ. ನಾಗರಾಜಶೆಟ್ಟಿ: ಮಂಗಳೂರಿನಲ್ಲಿ ಮೂರು ಜನ ಸತ್ತು ಹೋಗಿದ್ದಾರೆ, ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಿದರೆ ಕೂಡಲೇ ನಿವಾರಿಸಬಹುದು.

ಶ್ರೀ ಧರ್ಮಸಿಂಗ್: ಮಾನ್ಯ ಹೆಗಡೆಯವರು ಹೇಳುತ್ತಿದ್ದಾರೆ, ಅವರು ಯಾರು? ವಿಜಯಮಲ್ಯರವರಿಗೆ ನಾವೇ ವೋಟು ಕೊಟ್ಟು ರಾಜ್ಯಸಭೆಗೆ ಕಳುಹಿಸಿದ್ದೇವೆ, ವಿಜಯಮಲ್ಯರಿಗೆ ನಾವು ಎಷ್ಟೋ ಸಾರಿ ಫೋನು ಮಾಡಿದ್ದೇನೆ, ನೀವು ಸ್ವಲ್ಪ ಸಣ್ಣ ಕೆಲಸ ಮಾಡಬೇಕು ಎಂದು ಹೇಳಿದ್ದೆವು, ಅವರು ಅಲ್ಲಿಗೆ ಮ್ಯಾನೇಜರ್ ಕೂಡ ಕಳುಹಿಸಿದ್ದರು ತಮಗೆ ಗೊತ್ತಿರಬಹುದು. ಮಂಗಳೂರಿನಿಂದ ಮಾಜಿ ಶಾಸಕರು ಬಹಳಷ್ಟು ಜನ ಬಂದಿದ್ದು ಅದರ ಬಗ್ಗೆ ಚರ್ಚೆ ಮಾಡಿದ್ದೇವೆ. ನಾವು ನೀವೂ ಕೂಡಿ ಇನ್ನೊಂದು ಸಲ ಅವರನ್ನು ಕರೆಸಿ ಮಾತನಾಡಿ ಪರಿಹಾರ ಮಾಡೋಣ.

7. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರಿದ ಚರ್ಚೆ.

ಶ್ರೀ ಡಿ.ಎನ್. ಜೀವರಾಜ್: ಸಾಮಾಜಿಕ ಅರಣ್ಯದಲ್ಲಿ ಅಕೇಶಿಯಾ ಗಿಡ ನೆಡುವುದರ ಬಗ್ಗೆ ನಾನು ಹೇಳುತ್ತಿದ್ದೆ. ಈ ಅಕೇಶಿಯಾ ಪರಿಸ್ಥಿತಿ ಹೇಗಿದೆ ಎಂದರೆ, . .

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಪರಿಸರ ಜೀವಿಶಾಸ್ತ್ರ ಸಚಿವರು): ಮಾನ್ಯ ಅಧ್ಯಕ್ಷರು ಈ ಅಕೇಶಿಯಾ ಬೀಜವನ್ನು ರೈತರಿಗೆ ಯಾವಾಗ ಕೊಡುತ್ತೇವೆ ಎಂಬುದರ ಬಗ್ಗೆ ಹೇಳುತ್ತೇನೆ. ಈಗ ಏನಾಗಿದೆ ಎಂದರೆ ಖಾಸಗಿ ಜಮೀನುದಾರರು ಅವರು ಯಾವ ಬೀಜ ಕೇಳುತ್ತಾರೋ ಆ ಬೀಜಗಳನ್ನು ಕೊಡುತ್ತೇವೆ, ಬೇವು, ಅಕೇಶಿಯಾ, ಹೊಂಗೆ, ಹುಣಿಸೆ, ನೇರಳೆ, ತೇಗ, ಹೀಗೆ ಬೇರೆ ಬೇರೆ ಸಸಿಗಳನ್ನೂ ಕೂಡ ಕೊಡುತ್ತೇವೆ. ಅವರು ಯಾವುದು ಕೇಳುತ್ತಾರೋ ಅದನ್ನು ನಾವು ಕೊಡುತ್ತೇವೆ. ಆದರೆ ಖಾಸಗಿಯವರು ಜಾಸ್ತಿ ಅಕೇಶಿಯಾ ಬೇಕು ಎಂದಾಗ ನಾವು ಏನೂ ಮಾಡಲಿಕ್ಕೆ ಆಗುವುದಿಲ್ಲ. ನಮ್ಮಲ್ಲಿ ಏನು ಮಾಡಬೇಕು ಎಂದು ನೀವು ಸಲಹೆ ಕೊಡಿ ಏನೇನು ಮಾಡಬೇಕೋ ಅದನ್ನು ಮಾಡೋಣ.

ಶ್ರೀ ಡಿ.ಎನ್. ಜೀವರಾಜ್: ಮಾನ್ಯ ಮಂತ್ರಿಗಳು, ರೈತರು ಅಕೇಶಿಯಾ ಗಿಡ ಕೇಳುತ್ತಾರೆ ಆದುದರಿಂದ ನಾವು ಕೊಡುತ್ತೇವೆಂದು ಹೇಳುತ್ತಿದ್ದಾರೆ, ಇದು ಬೇಗ ಬೆಳೆಯುತ್ತದೆಂದು ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು, ಇದು ಅಕೇಶಿಯಾ, ಮ್ಯಾಂಜಿಯಂ ಇದೆ, ಈ ರೀತಿಯಾಗಿ ಹೇಳಿ ಹೇಳಿ ಕೊಡುವಂಥ ಸಂಪ್ರದಾಯವನ್ನು ರೂಢಿ ಮಾಡಿಕೊಂಡಿದ್ದಾರೆ. ಇದರ ಜೊತೆಗೆ ನನ್ನ ತಾಲ್ಲೂಕಿನಲ್ಲಿ ಉದಾಹರಣೆ ಕೊಡುವುದಾದರೆ, ಬಹಳ ಚೆಂದ ಇದ್ದಂಥ ಕಾಡನ್ನು ಕ್ಲಿಯರ್ ಫೆಲ್ಲಿಂಗ್ ಮಾಡಿದ್ದಾರೆ, ಸುತ್ತಾ ಎನ್ನುವಂಥ ಒಂದು ಊರಿನಲ್ಲಿ ಏನೂ ಇಲ್ಲದಿರುವಂಥ ಗಿಡಗಳನ್ನು ಪೂರ ಕಿತ್ತು ಹಾಕಿ ಅದಕ್ಕೆ ಈಗ ಅಕೇಶಿಯಾ ಎನ್ನುವಂಥ ಗಿಡಗಳನ್ನು ನೆಡುವಂಥ ಪ್ರಯತ್ನ ನಡೆಯುತ್ತಿದೆ. ನಾನು ಆ ರೇಂಜ್ ಆಫೀಸರ್ ಅವರನ್ನು ಕರೆದು ಕೇಳಿದೆ, ಏಕೆ, ಈ ರೀತಿ ಮಾಡುತ್ತಿದ್ದೀರಿ, ಕ್ಲಿಯರ್ ಫೆಲ್ಲಿಂಗ್ ಮಾಡುವುದರಿಂದ ಏನು ಲಾಭ ಸಿಗುತ್ತದೆ, ಕಾಡು ಏಕೆ ಹಾಳು ಮಾಡುತ್ತೀರಿ ಎಂದು ಕೇಳಿದರೆ, ಅದಕ್ಕೆ ಅವರು ಸಾರ್ ಅದರ ಮಧ್ಯೆದಲ್ಲಿ ಬುಲ್ಡೋಜರ್ ಹೋಗುವುದಿಲ್ಲ ಸಾರ್, ಅದರ ಮಧ್ಯೆ ಬುಲ್ಡೋಜರ್ ಹೋಗದೇ ಇದ್ದರೆ ನಮ್ಮ ಲೇಬರ್ ಕೆಲಸ ಮಾಡಿಸದಿದ್ದರೆ ನರ್ಸ್‌ಔಟ್